11.	ಆಯಕಟ್ ರಸ್ತೆಗಳು	45.00	20.49
12.	ವಸತಿ ಸೌಲಭ್ಯ	5.00	0.98
13.	ಉಗ್ರಾಣಗಳನ್ನು ಕಟ್ಟುವುದು	2.00	–
14.	ರೈತ ಭಾಗವಹಿಸುವಿಕೆ ಮತ್ತು ನಿರ್ವಹಣೆ	1.00	–
15.	ಜವಳು ಭೂಮಿಯನ್ನು ಕೃಷಿಯೋಗ್ಯ ಮಾಡುವಿಕೆ	2.00	–
16.	ಭೂ ಅಭಿವೃದ್ಧಿ ತರಬೇತಿ ಕೇಂದ್ರ	–	–
17.	ಭೂ ಆಂತರ್ಜಲ ಸಂಶೋಧನೆ	2.00	–
18.	ಇತರೆ	5.00	3.25
	ಒಟ್ಟು	629.48	265.40

ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ರಸ್ತೆಗಳ ದುರಸ್ತಿ

176 (1033): ಶ್ರೀ ಶಿವಶೇಖರಪ್ಪ ಗೌಡ ಶಿರವಾಳ, (ಶಹಾಪುರ):–

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ಸುರಪುರ ಕಂಭಾವಿ ಲೋಕೋಪಯೋಗಿ ರಸ್ತೆ ಹಾಳಾಗಿದ್ದು, ಇದನ್ನು ನೀರಾವರಿ ಇಲಾಖೆಯವರು ವಹಿಸಿಕೊಂಡಿರುವರೆ;

ಆ) ಹಾಗಿದ್ದಲ್ಲಿ, ಇದನ್ನು ಕೃಷ್ಣಾ ಮೇಲ್ದಂಡೆ (ಪ್ರಚ್ಚುಕಟ್ಟು ರಸ್ತೆ) ಯೋಜನೆಯಲ್ಲಿ ಕೈಕೊಳ್ಳಲಾಗುವುದೇ;

ಇ) ದುರಸ್ತಿ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಈ ರಸ್ತೆಯು ಸಧ್ಯಕ್ಕೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿದ್ದು ಇದನ್ನು ನೀರಾವರಿ ಇಲಾಖೆಯ ಕೃಷ್ಣ ಮೇಲ್ದಂಡೆ ಯೋಜನೆಗೆ ಹಸ್ತಾಂತರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಈ ದಿಕ್ಕಿನಲ್ಲಿ ಆದಷ್ಟು ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಇ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಈ ರಸ್ತೆಯ ಸುಧಾರಣೆಯ ಕಾಮಗಾರಿಯನ್ನು 1994-95ರಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರದಲ್ಲಿ ಹರಿಜನ – ಗಿರಿಜನರನ್ನು ವಕೀಲರನ್ನಾಗಿ ನೇಮಕ.

178 (754): ಶ್ರೀ ಕರಿಯಣ್ಣ (ಹೊಳೇಹೊನ್ನೂರು):–

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ವಕೀಲರನ್ನು ಕೋರ್ಟುಗಳಲ್ಲಿ ಸರ್ಕಾರಿ ವಕೀಲರನ್ನಾಗಿ ನೇಮಕ ಮಾಡಲಾಗಿದೆ;

ಆ) ಅವರಲ್ಲಿ ಹರಿಜನ–ಗಿರಿಜನರ ಸಂಖ್ಯೆ ಎಷ್ಟು;

ಇ) ಹರಿಜನ-ಗಿರಿಜನರಿಗೆ ನೇಮಕ ಮಾಡಲು ಏನು ತೊಂದರೆ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-

ಅ) 38 ಜನ ವಕೀಲರನ್ನು ನೇಮಕಾತಿ ಮಾಡಲಾಗಿದೆ.

ಆ) 05 ಹರಿಜನರು
04 ಗಿರಿಜನರು

ಇ) ಹರಿಜನ ಗಿರಿಜನರನ್ನು ಸರ್ಕಾರಿ ವಕೀಲರನ್ನಾಗಿ ನೇಮಕಾತಿ ಮಾಡಲು ಸಾಕಷ್ಟು ಅರ್ಜಿಗಳನ್ನು ಸಲ್ಲಿಸದೆ ಇರುವುದರಿಂದ ಅವರನ್ನು ಸರ್ಕಾರಿ ವಕೀಲರನ್ನಾಗಿ ನೇಮಕಾತಿ ಮಾಡಲು ಸಾಧ್ಯವಾಗಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಸರ್ಕಾರಿ ವಕೀಲರಾಗಿ ನೇಮಕಾತಿ ಬಯಸಿ ಅರ್ಜಿ ಬಂದಲ್ಲಿ ಅವರ ಅರ್ಹತೆಯನ್ನು ಪರಿಶೀಲಿಸಿ ಸರ್ಕಾರ ವಕೀಲರಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ ದಿನಾಂಕ 26ನೇ ತಾರೀಖು ಫೆಬ್ರವರಿ 93ರಂದು ವಿಧಾನಸಭೆಯ ಅಧಿವೇಶನ ಇಲ್ಲದಿದ್ದ ಕಾರಣ ಆ ದಿನದ ಚುಕ್ಕೆ ಗುರುತಿನ ಎಂಟನೇ ಪಟ್ಟಿಯ 20 ಪ್ರಶ್ನೆಗಳ ಪೈಕಿ ನಾಲ್ಕು ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಚುಕ್ಕೆ ಗುರುತಿಲ್ಲದ ಎಂಟನೇ ಪಟ್ಟಿಯ 76 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಈ ದಿನ 1.3.93ರ ಲಿಖಿತ ಮೂಲಕ ಉತ್ತರಿಸುವ ಒಂಭತ್ತನೆಯ ಪಟ್ಟಿಯ 68 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ.

1121, 1295, 1307, 1326, 1305, 1281, 1280, 1275, 1264, 11, 60, 36, 98, 663, 340, 877, 565, 731, 839, 837, 548, 864, 547, 455, 989, 994, 546, 343, 1177, 1178, 1180, 1181, 1131 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 35 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಮೊಕದ್ದಮೆಗಳು

437 (1306): ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ):-

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ, ಇನ್ನೂ ವಿಲೇವಾರಿ ಆಗದೇ ಇರುವ ಮೊಕದ್ದಮೆಗಳು ಎಷ್ಟು;

ಆ) ಅವು ಯಾವ ಯಾವ ನ್ಯಾಯಾಲಯಗಳಲ್ಲಿವೆ; (ವಿವರ ನೀಡುವುದು);

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-

ಅ) 31-12-1992ರಲ್ಲಿದ್ದಂತೆ (ಉಚ್ಚ ನ್ಯಾಯಾಲಯವನ್ನು ಒಳಗೊಂಡಂತೆ),

6,07,814 ಸಿವಿಲ್ ಪ್ರಕರಣಗಳು ಮತ್ತು 5,12,883 ಕ್ರಿಮಿನಲ್ ಪ್ರಕರಣಗಳಾಗಿರುತ್ತವೆ.